ತಾನು ಹಾದು ಹೋದ ಹಳ್ಳಿಹಳ್ಳಿಗಳಲ್ಲಿ ಸಮಾಜ ಪರಿವರ್ತನೆಯ ಸಂದೇಶ ತಲುಪಿಸುತ್ತಿತ್ತು; ಹಳ್ಳಿಗಳ ಆರ್ಥಿಕ–ಸಾಮಾಜಿಕ ಸ್ಥಿತಿಗಳ ಬಗೆಗೆ ಅಂಕಿ ಅಂಶಗಳ ಸಂಗ್ರಹ ಮಾಡುತ್ತಿತ್ತು. 'ದಂಡಿ ಮಾರ್ಚ್', 'ದಂಡಿ ಯಾತ್ರೆ' ಎಂದೇ ಮುಂದೆ ಪ್ರಸಿದ್ಧವಾದ ಈ ಯಾತ್ರೆಯ ಸಂದೇಶದಿಂದ ಇಡೀ ದೇಶ ಎಚ್ಚೆತ್ತಿತು. ಸತ್ಯಾಗ್ರಹಿಗಳ ತಂಡ ಇಪ್ಪತ್ತಾಲ್ಕು ದಿನಗಳ ಕಾಲ 240 ಕಿಲೋಮೀಟರ್ ನಡೆದು, ಏಪ್ರಿಲ್ ತಿಂಗಳ 5ನೇ ತಾರೀಕು ಗುಜರಾತಿನ ಅರಬ್ಬಿ ಸಮುದ್ರ ತೀರದಲ್ಲಿದ್ದ ದಂಡಿ ಊರಿಗೆ ತಲುಪಿತು.

6 ಏಪ್ರಿಲ್ 1930. ಬೆಳ್ಳಂಬೆಳಗಿಗೇ ಗಾಂಧೀಜಿ ದಂಡಿಯ ಕಡಲ ತಡಿಯಲ್ಲಿ ಮಿಂದರು; ಕೊಂಚ ದೂರ ಸಾಗಿ ನೆಲದಿಂದ ಉಪ್ಪನ್ನು ಹಿಡಿದೆತ್ತಿ ಉಪ್ಪಿನ ಕಾಯ್ದೆಯನ್ನು ಮುರಿದರು. ದೇಶದ ಇತರ ಕಡಲ ತೀರಗಳಲ್ಲೂ ಜನ ಸತ್ಯಾಗ್ರಹಿಗಳಾದರು. ಉಪ್ಪು ತಯಾರಿಸಿದರು, ಮನೆಗಳಿಗೆ ಒಯ್ದರು, ಮಾರಿದರು, ಜನರು ಕೊಂಡರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸತ್ಯಾಗ್ರಹ ಸೇರಿಕೊಂಡರು.

ಬ್ರಿಟಿಷ್ ಸರ್ಕಾರ ಸತ್ಯಾಗ್ರಹಿಗಳ ಮೇಲೆ ಹಲ್ಲೆ ನಡೆಸಿತು. ಸತ್ಯಾಗ್ರಹಿಗಳ ಮೇಲೆ ದಾಳಿ ಮಾಡಿ ಉಪ್ಪನ್ನು ವಶಪಡಿಸಿಕೊಂಡಿತು. ನಾಯಕರು ಸೆರೆಯಾದರು. 'ಸತ್ಯಾಗ್ರಹಿಗಳ ಹಿಡಿಯಲ್ಲಿರುವ ಉಪ್ಪು ದೇಶದ ಗೌರವವನ್ನು ಸಂಕೇತಿಸುತ್ತದೆ' ಎಂದರು ಗಾಂಧೀಜಿ. ನೆಹರು ಸೇರಿದಂತೆ ದೊಡ್ಡ ದೊಡ್ಡ ನಾಯಕರನ್ನು ಸರ್ಕಾರ ಸೆರೆಯಲ್ಲಿಟ್ಟಿತು. ಗಾಂಧೀಜಿ ಯರವಾಡ ಜೈಲು ಸೇರಿದರು; ಜೊತೆಗೆ ತಮ್ಮ ಸಂಗಾತಿ ತಕಲಿಯನ್ನೂ ಒಯ್ದರು!

ಹಿರಿಯ ನಾಯಕರು ಜೈಲು ಸೇರಿದರೂ ಉಪ್ಪಿನ ಸತ್ಯಾಗ್ರಹ ನಿಲ್ಲಲಿಲ್ಲ. ಹೊಸ ನಾಯಕರು, ಹೊಸ ತಂಡಗಳು ತಯಾರಾಗುತ್ತಲೇ ಇದ್ದವು. 21 ಮೇ 1930. ಕವಯಿತ್ರಿ ಸರೋಜಿನಿ ನಾಯ್ಡು, ಗಾಂಧೀಜಿಯ ಮಗ ಮಣಿಲಾಲ್ ಗಾಂಧಿ ಮೊದಲಾದವರು ದಂಡಿಗೆ ಹತ್ತಿರವಿರುವ ಧರಸಾನಾದಲ್ಲಿ 2500 ಸತ್ಯಾಗ್ರಹಿಗಳ ತಂಡವನ್ನು ಮುನ್ನಡೆಸಿದರು. ಸತ್ಯಾಗ್ರಹಿಗಳು ಹತ್ತಿರ ಬಂದಂತೆ ಪೊಲೀಸರು ಲಾಠಿ ಬೀಸಿದರು. ಹಲ್ಲೆಯಲ್ಲಿ ಗಾಯಗೊಂಡವರನ್ನು ಸತ್ಯಾಗ್ರಹಿಗಳ ಒಂದು ತಂಡ ಆಸ್ಪತ್ರೆಗೆ ಸಾಗಿಸುತ್ತಿತ್ತು; ಮತ್ತೊಂದು ತಂಡ ಬಂದು ಸತ್ಯಾಗ್ರಹವನ್ನು ಮುಂದುವರಿಸುತ್ತಿತ್ತು. ಈ ಧರಸಾನಾ ಉಪ್ಪಿನ ಸತ್ಯಾಗ್ರಹದಲ್ಲಿ ಪೊಲೀಸರ ಭೀಕರ ಹಲ್ಲೆಗೊಳಗಾದವರಲ್ಲಿ ಲೋಹಿಯಾ ತಂದೆ ಹೀರಾಲಾಲ್ ಕೂಡ ಇದ್ದರು. ಸತ್ಯಾಗ್ರಹಿಗಳ ಮೇಲೆ ಪೊಲೀಸರು ನಡೆಸಿದ ಅತ್ಯಾಚಾರದ ವಿವರಗಳು ಅಪ್ಪ ಬರೆದ ಪತ್ರದಿಂದ ಲೋಹಿಯಾಗೆ ತಿಳಿದವು

ಮುಂದೆ ಚರಿತ್ರೆಯ ಪುಟಗಳಲ್ಲಿ ಇಡೀ ಜಗತ್ತಿನಲ್ಲೇ ಅಪೂರ್ವವಾದ ಅಸಹಕಾರ ಚಳುವಳಿಯೆಂದು ದಾಖಲಾದ 'ಉಪ್ಪಿನ ಸತ್ಯಾಗ್ರಹ' ಲೋಹಿಯಾರ ಪಿಎಚ್.ಡಿ. ಸಂಶೋಧನೆಯ ವಸ್ತುವಾದದ್ದು ಸಹಜವಾಗಿತ್ತು.

ಲೋಹಿಯಾ ಬರ್ಲಿನ್‌ಗೆ ಬಂದ ಹೊಸತರಲ್ಲಿ ಅಲ್ಲಿನ ವೇಂಡ್ರಿ ಸರೋವರದಲ್ಲಿ ಈಜಲು ಹೋಗಿ ಸಾವಿನ ದವಡೆಗೆ ಸಿಕ್ಕು ಪಾರಾದ ಘಟನೆಯೂ ನಡೆಯಿತು! ಮುಂದೊಮ್ಮೆ ಗೆಳತಿ ರಮಾ ಮಿತ್ರರಿಗೆ ಬರೆದ ಪತ್ರದಲ್ಲಿ ಆ ಘಟನೆಯನ್ನು ಲೋಹಿಯಾ ನೆನೆಸಿಕೊಳ್ಳುತ್ತಾರೆ: 'ಹೆಣ್ಣಿನ ಕಂಕುಳ ಬಗ್ಗೆ ನನಗೆ ಮೊದಲಿನಿಂದಲೂ ವಿಚಿತ್ರ ಮೋಹ; ಜಾಹಿರಾತಿನಲ್ಲಿ ಹೆಣ್ಣಿನ ಕಂಕುಳು ನೋಡಿದಾಗಲೂ ಮೋಹ ಉಕ್ಕುತ್ತದೆ. ಬರ್ಲಿನ್ನಿನ ವೇಂಡ್ರಿ ಸರೋವರದಲ್ಲಿ ನಾನು ಇನ್ನೇನು ಮುಳುಗಿಹೋಗಲಿದ್ದ ಬಗ್ಗೆ ನಿನಗೆ ಹೇಳಿದ್ದೇನೆಯೆ? ಕೂಗಿಕೊಳ್ಳೋಣವೆಂದರೆ ಮರ್ಯಾದೆಯ ಪ್ರಶ್ನೆ! ಆಗ ನನ್ನ ಚಿತ್ತದಲ್ಲಿ ಮಿಂಚಿದ್ದು ಸಾವಿರಾರು ಭವ್ಯ ಕಂಕುಳುಗಳು! ಹೆಣ್ಣಿನ ಕಂಕುಳುಗಳ ಬಗ್ಗೆ ಇನ್ನೂ ಹೆಚ್ಚು ತಿಳಿಯದೆ, ಪೂರ್ಣವಾಗಿ, ಸರಿಯಾಗಿ ಅವನ್ನು ನೋಡದೆಯೇ ಅಕಾಲ ಮರಣಕ್ಕೆ ತುತ್ತಾಗುತ್ತಿದ್ದೆನೋ ಏನೋ! ಆಗ ನನಗೆ 19–20ರ ಪ್ರಾಯ. ಕಂಕುಳುಗಳ ಬಗೆಗಿನ ಆ ಸೆಳೆತ ಈಗಲೂ ಕಡಿಮೆಯಾಗಿದೆ ಎಂದು ನನಗನಿಸುವುದಿಲ್ಲ. ಈ ರೀತಿಯ ಬಯಕೆ ಸ್ತ್ರೀಯರಲ್ಲಿಯೂ ಇದೆಯೆ! ತನ್ನಲ್ಲಿಲ್ಲದ ಏನನ್ನಾದರೂ ನೋಡಿ ಸ್ತ್ರೀಯರ ಮನಸ್ಸು ಒಳಗೊಳಗೇ ಚಡಪಡಿಸುತ್ತದೆಯೆ?'

23 ಮಾರ್ಚ್ 1931. ಲಾಹೋರ್ ಜೈಲಿನಲ್ಲಿ ಬಂಧನದಲ್ಲಿದ್ದ ಸ್ವಾತಂತ್ರ್ಯಯೋಧ ಭಗತ್‌ಸಿಂಗ್‌ರನ್ನು ಬ್ರಿಟಿಷ್ ಸರ್ಕಾರ ನೇಣಿಗೇರಿಸಿತು. ಮಾರ್ಚ್ 23 ಲೋಹಿಯಾ ಹುಟ್ಟಿದ ದಿನ. ಅವತ್ತಿನಿಂದ ಲೋಹಿಯಾ ತಮ್ಮ ಹುಟ್ಟುಹಬ್ಬವನ್ನು ಆಚರಿಸುವುದಿಲ್ಲವೆಂದು ತೀರ್ಮಾನಿಸಿದರು.

ಈ ನಡುವೆ ಸ್ವಿಟ್ಜರ್‌ಲ್ಯಾಂಡ್‌ನ ಜಿನೀವಾದಲ್ಲಿ 'ಲೀಗ್ ಆಫ್ ನೇಷನ್ಸ್' ಸಭೆ ನಡೆಯುವ ಸುದ್ದಿ ಬಂತು. 'ಲೀಗ್ ಆಫ್ ನೇಷನ್ಸ್' ಮೊದಲನೆಯ ಮಹಾಯುದ್ಧದ ನಂತರ ರಾಷ್ಟ್ರಗಳ ನಡುವಣ ವ್ಯಾಜ್ಯಗಳನ್ನು ಬಗೆಹರಿಸಲು ಹುಟ್ಟಿಕೊಂಡ ಸಂಸ್ಥೆ. ಈ ಸಭೆಯಲ್ಲಿ ಭಾಗವಹಿಸಲು ಭಾರತದಿಂದ ಬ್ರಿಟಿಷ್ ಸರ್ಕಾರದ ಪ್ರತಿನಿಧಿಯಾಗಿ ಮಹಾರಾಜ ಗಂಗಾಸಿಂಗ್ ಬರುವ ಸುದ್ದಿ ಬಂತು. ಬ್ರಿಟಿಷ್ ಆಶ್ರಿತ ಅರಸೊತ್ತಿಗೆಯಾಗಿದ್ದ ರಾಜಸ್ಥಾನದ ಬಿಕನೇರ್‌ನ ಗಂಗಾಸಿಂಗ್ ಬ್ರಿಟಿಷ್ ವೈಸರಾಯ್‌ಗಳಿಗೆ ಅಚ್ಚುಮೆಚ್ಚಿನವನಾಗಿದ್ದ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಲೋಹಿಯಾಗೆ ಬ್ರಿಟಿಷ್ ಆಡಳಿತದ ಜೊತೆ ಹೊಂದಾಣಿಕೆ ಮಾಡಿಕೊಂಡು, ಬ್ರಿಟಿಷರ ಆಶ್ರಯದಲ್ಲಿದ್ದ ರಾಜಮನೆತನಗಳ ಬಗ್ಗೆ, ರಾಜರುಗಳ ಬಗ್ಗೆ ತಾತ್ಸಾರವಿದ್ದದ್ದು ಸಹಜವಾಗಿತ್ತು. 'ಲೀಗ್ ಆಫ್ ನೇಷನ್ಸ್' ಸಭೆಗೆ ಹೋಗಿ ಮಹಾರಾಜ ಏನು ಮಾತಾಡಬಹುದು ನೋಡೋಣವೆಂದು ಲೋಹಿಯಾ ತೀರ್ಮಾನಿಸಿದರು.

ಲೋಹಿಯಾ ಥರದ ವಿದ್ಯಾರ್ಥಿಗಳಿಗೆ ಆ ಗಣ್ಯ ಸಭೆಯ ಪ್ರೇಕ್ಷಕರ ಗ್ಯಾಲರಿಯಲ್ಲಿ ಕೂಡ ಸೀಟು ಸಿಗುವುದು ಕಷ್ಟವಿತ್ತು. 'ಲೀಗ್ ಆಫ್ ನೇಷನ್ಸ್' ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯ ಸಿಬ್ಬಂದಿಯನ್ನು ಕಂಡು ಅವರನ್ನು ಮರುಳು ಮಾಡಿದ ಲೋಹಿಯಾ ಪಾಸ್ ಗಿಟ್ಟಿಸಿಕೊಂಡರು. ಗೋವಾದಿಂದ ಬಂದು ತಮ್ಮ ಜೊತೆಯಲ್ಲೇ ಓದುತ್ತಿದ್ದ ಗೆಳೆಯ ಜೂಲಿಯೊ ಮೆನೆಜಿಸ್ ಜೊತೆ ಸಭೆಗೆ ಹೊರಟರು. ಪ್ರೇಕ್ಷಕರ ಗ್ಯಾಲರಿಯಲ್ಲಿ ಗೆಳೆಯರಿಬ್ಬರೂ ಕೂತರು.

ಮಹಾರಾಜ ಗಂಗಾಸಿಂಗ್ ಶಾಂತಿಯ ಬಗ್ಗೆ ಮಾತಾಡತೊಡಗಿದ ತಕ್ಷಣ ಲೋಹಿಯಾಗೆ ರೇಗಿಹೋಯಿತು. ಉಪ್ಪಿನ ಸತ್ಯಾಗ್ರಹಿಗಳ ಮೇಲೆ ಬ್ರಿಟಿಷ್ ಆಡಳಿತ ನಡೆಸಿದ ಹಿಂಸೆಯ ಚಿತ್ರಗಳು ಇನ್ನೂ ಹಸಿಯಾಗಿರುವಾಗಲೇ ಭಾರತದ ಪ್ರತಿನಿಧಿಯಾಗಿ ಬಂದ ಗಂಗಾಸಿಂಗ್ ಶಾಂತಿಯ ಬಗ್ಗೆ ಮಾತಾಡುತ್ತಿದ್ದ! ಬ್ರಿಟಿಷ್ ಆಡಳಿತದಲ್ಲಿ ಭಾರತ ಸಮೃದ್ಧವಾಗಿದೆ ಎಂಬ ಧಾಟಿಯಲ್ಲಿ ಗಂಗಾಸಿಂಗ್ ಹೊಗಳಿಕೆ ಶುರುವಾಯಿತು. ಬಿಕನೇರಿನ ರಾಜನನ್ನು ಅಣಕಿಸುವಂತೆ ಲೋಹಿಯಾ ಶಿಳ್ಳೆ ಹೊಡೆದರು. ಸಭೆ ಸ್ತಬ್ದವಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ರೊಮೇನಿಯಾ ಸ್ಟೇಟಸ್ಕೋ ಸದ್ದು ಬಂದತ್ತ ನೋಡಿ ಚಣ ನಕ್ಕರು; ಮರುಚಣವೇ ರೇಗಿ, 'ಮಹಾರಾಜರಿಗೆ ಅಪಮಾನ ಮಾಡಿದ ಆ ಇಬ್ಬರು ಅಸಭ್ಯರನ್ನು ಹೊರ ಹಾಕಿ' ಎಂದು

## ಕಳೆದ ಸಂಚಿಕೆಯಲ್ಲಿ



ಉತ್ತರಪ್ರದೇಶದ ಫೈಝಾಬಾದ್ ಜಿಲ್ಲೆಯ ತಮಸಾ ನದಿಯ ದಂಡೆಯ ಮೇಲಿರುವ ಅಕ್ಬರ್‌ಪುರದ ರಾಮಮನೋಹರ ಲೋಹಿಯಾ, 'ನಮ್ಮಮ್ಮ ಮಿಥಿಲೆಯವರು, ನಮ್ಮಪ್ಪ ಅಯೋಧ್ಯೆಯವರು' ಎಂದು ಹೇಳಿಕೊಳ್ಳುತ್ತಿದ್ದರು. ಎರಡೂವರೆ ವರ್ಷದ ಬಾಲಕನಿದ್ದಾಗಲೇ ಅಮ್ಮನನ್ನು ಕಳೆದುಕೊಂಡ ಬಾಲಕ ಬೆಳೆದದ್ದು ಅಪ್ಪನ ಕಣ್ಗಾವಲಿನಲ್ಲಿ. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಹೀರಾಲಾಲ್ ಪ್ರಭಾವ ಸಹಜವಾಗಿಯೇ ಮಗನ ಮೇಲೂ ಆಯಿತು. ಹಲವು ತಾಯಂದಿರ ಅಕ್ಕರೆಯ ಮಡಿಲಲ್ಲಿ ಬೆಳೆದ ಹುಡುಗ, ಗಾಂಧೀಜಿ ಅವರ ಅಸಹಕಾರ ಚಳವಳಿಯ ಕರೆಗೆ ಓಗೊಟ್ಟಿದ್ದ. ಶಾಲೆಗಳನ್ನು ಬಹಿಷ್ಕರಿಸಿ ತಿಲಕರ ಅಂತಿಮಸಂಸ್ಕಾರದಲ್ಲಿ ಭಾಗವಹಿಸಿದ್ದ. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಥಮದರ್ಜೆ ಪಡೆದು, ಉನ್ನತ ವ್ಯಾಸಂಗಕ್ಕಾಗಿ ಬನಾರಸ್ ವಿವಿ ಸೇರಿಕೊಂಡ. ಕಾಲೇಜಿನ ಪಠ್ಯಪುಸ್ತಕಗಳಿಗಿಂತಲೂ ಇತರ ಪುಸ್ತಕಗಳನ್ನು ಓದುವುದೇ ಹೆಚ್ಚಾಯಿತು. ವ್ಯಾಪಕ ಓದಿನೊಂದಿಗೆ ತಿರುಗಾಟದ ಅನುಭವಗಳೂ ಸೇರಿಕೊಂಡು ಲೋಹಿಯಾ ವ್ಯಕ್ತಿತ್ವದ ಹೊಳಪು ಹೆಚ್ಚಿತು. ಕಾದಂಬರಿಗಳೊಂದಿಗೆ ಜನಪ್ರಿಯ ಸಿನಿಮಾಲೋಕವೂ ಅವರನ್ನು ಸೆಳೆಯುತ್ತಿತ್ತು.